ಹಾಗೂ ರೋಮಾಂಚನವನ್ನುಂಟುಮಾಡುವ ಕಥನವಾಗಿದೆ. ಪ್ರಬಲವಾದ ಸ್ಪರ್ಧೆ, ಅನುಮಾನ, ಗುಟ್ಟು ಹಾಗೂ ಕ್ರೌರ್ಯ, ಈ ಮಾನವ ಸಹಜವಾದ ಗುಣಗಳೂ ಈ ಸಾಹಸಯಾನದ ಅಂಗವಾಗಿವೆ.

ಸಾಂಬಾರ ಪದಾರ್ಥಗಳ ದ್ವೀಪಗಳಿಗೆ ಪಶ್ಚಿಮದ ಕಡೆಯಿಂದ ಹೊಸ ಹಾಗೂ ಕಡಿಮೆ ಸಮಯ ತೆಗೆದುಕೊಳ್ಳುವ ಹಾದಿಯನ್ನು ಕಂಡುಹಿಡಿಯುವ ಸಲುವಾಗಿ ಹುಚ್ಚು ಧೈರ್ಯದಿಂದ ಹೊರಟ ಮೆಗಲಾನ್, ತನ್ನ ಉದ್ದೇಶ ಸಾಧನೆಯ ನಿಟ್ಟಿನಲ್ಲಿ ಪಟ್ಟ ಕಷ್ಟ ಅಷ್ಟಿಷ್ಟಲ್ಲ. ಆದರೆ ಅನ್ವೇಷಕರ (ಎಕ್ಸ್‌ಪ್ಲೋರರ್ಸ್) ಮನೋಧರ್ಮವೇ ಅಂತಹುದು. ಇದಕ್ಕೆ ಪೂರಕವಾಗಿ ಚರಿತ್ರೆಯಲ್ಲಿ ಕೊಲಂಬಸ್, ಬಾರ್ತೊಲೊಮಿಯೊ ಡಯಾಸ್, ವಾಸ್ಕೋ ಡ ಗಾಮಾ, ಮೆಗಲಾನ್, ಫ್ರಾನ್ಸಿಸ್ ಡ್ರೇಕ್, ಜೇಮ್ಸ್ ಕುಕ್, ರಾಬರ್ಟ್ ಪಿಯರಿ, ರೊಆಲ್ಡ್ ಅಮುಡ್ಸನ್, ಹೀಗೆ ಅನೇಕರ ಸಾಧನೆಗಳು ನಮಗೆ ಗೋಚರಿಸುತ್ತದೆ.

ಇಲ್ಲಿ ಇನ್ನೊಂದು ಕುತೂಹಲಕಾರಿ ವಿಷಯವೆಂದರೆ, ಮೆಗಲಾನ್ ಹೊಸ ಮಾರ್ಗವನ್ನು ಶೋಧಿಸುತ್ತಾ ಹುಡುಕಿಕೊಂಡು ಹೊರಟ ಸಾಂಬಾರ ಪದಾರ್ಥಗಳು ಬೇರೇನೂ ಅಲ್ಲ; ಇಂದು ನಾವು ಭಾರತದಲ್ಲಿ ಇಷ್ಟಪಟ್ಟು ಸೇವಿಸುವ ಮತ್ತು ಇವಿಲ್ಲದೇ 'ಬದುಕಲು' ಅಸಾಧ್ಯವಾದ ಮಸಾಲೆ ಪದಾರ್ಥಗಳಾದ – ಲವಂಗ, ದಾಲ್ಚಿನ್ನಿ, ಚಕ್ಕೆ, ಮೆಣಸು ಮುಂತಾದವುಗಳು ಅಷ್ಟೆ.

ಅಂದಿನ ಯೂರೋಪ್‌ನಲ್ಲಿ ಇವನ್ನು ಆಹಾರದ ರುಚಿ ಹೆಚ್ಚಿಸಲು, ಅವು ಕೆಡದಂತೆ ಕಾಪಾಡಲು ಹಾಗೂ ಕಾಮೋತ್ತೇಜಕ ವಸ್ತುಗಳಾಗಿ ಬಳಸಲಾಗುತ್ತಿತ್ತು. ಇಂದು ನಮ್ಮ ತರಕಾರಿ ಅಂಗಡಿಗಳಲ್ಲೂ ಅತ್ಯಂತ ಸುಲಭವಾದ ಬೆಲೆಗೆ ಪುಟ್ಟ ಪ್ಲಾಸ್ಟಿಕ್ ಕವರ್‌ಗಳಲ್ಲಿ ದೊರಕುವ ಈ ಅಡುಗೆ ಸಾಮಗ್ರಿಗಳಿಗೆ ಅವುಗಳ ತೂಕಕ್ಕಿಂತ ಹೆಚ್ಚು ಚಿನ್ನ ಐದು ಶತಮಾನಗಳ ಹಿಂದೆ ಯೂರೋಪ್‌ನಲ್ಲಿ ದೊರೆಯುತ್ತಿತ್ತು! ಹೀಗಾಗಿ ಅವುಗಳನ್ನು ಯೂರೋಪಿಗೆ ತಂದು ಮಾರುವುದು ಅತ್ಯಂತ ಲಾಭದಾಯಕವಾಗಿತ್ತು.

ಲಾಭದ ಮಾತು ಹಾಗಿರಲಿ, ಈ ಅನ್ವೇಷಕರು ಏಕೆ ಈ ರೀತಿ ಮೈನಡುಗಿಸುವಂತಹ ಅಪಾಯವನ್ನು ಮೈಮೇಲೆ ಹಾಕಿಕೊಂಡು ಹುಚ್ಚು ಧೈರ್ಯದಿಂದ ಹೊಸ ಜಾಗಗಳ ಅನ್ವೇಷಣೆ ನಡೆಸುತ್ತಾರೆ ಎಂಬ ಪ್ರಶ್ನೆ ಮನದಲ್ಲಿ ಮೂಡಬಹುದು.

## ತೀರದ ಅನ್ವೇಷಣಾ ದಾಹ

ಮಾನವ ಹುಟ್ಟು ಅನ್ವೇಷಕ ಎಂಬುದೇ



ಮೆಗಲಾನ್ ಜಲಸಂಧಿಯನ್ನು ಕಂಡುಹಿಡಿಯುವ ಪ್ರಯತ್ನದಲ್ಲಿ ಸಾಗುತ್ತಿರುವ ಎರಡು ಹಡಗುಗಳು, ಕಲಾವಿದನ ಕಲ್ಪನೆಯಲ್ಲಿ
ಚಿತ್ರಕೃಪೆ: ಆಲ್ವಾರ್ ಕೆಸನೋವಾ ಜೆನ್‌ಂಟೀನೊ



ಹ್ವಾನ್ ಸೆಬಾಸ್ಟಿಯನ್ ಎಲ್ ಕಾನೊ



ವಾಸ್ಕೋ ಡ ಗಾಮಾ



ಫರ್ಡಿನೆಂಡ್ ಮೆಗಲಾನ್
ಚಿತ್ರಕೃಪೆ: ಮ್ಯಾರಿನರ್ಸ್ ಮ್ಯೂಸಿಯಂ